# ಮುಚ್ಚುವ ಭೀತಿಯಲ್ಲಿ ರಟ್ಟಿನ ಪೆಟ್ಟಿಗೆ ಉದ್ಯಮ

**ಬೆಂಗಳೂರು:** ಕೆಲವೇ ತಿಂಗಳ ಅವಧಿಯಲ್ಲಿ ಗಣನೀಯ ವೆಚ್ಚ ಹೆಚ್ಚಳ ಮತ್ತು ಕಚ್ಚಾ ವಸ್ತು ಪೂರೈಕೆ ವ್ಯತ್ಯಯ ಹೀಗೆ ಅವಳಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಗೇಟೆಡ್ ಬಾಕ್ಸ್ ಉದ್ಯಮ ಇಂದು ಮುಚ್ಚುವ ಭೀತಿ ಎದುರಿಸುತ್ತಿದೆ. ಪೆಟ್ಟಿಗೆ ಉತ್ಪಾದಕರ ಒಟ್ಟು ವೆಚ್ಚ ಈಗಾಗಲೇ ಕಾಗದದ ಕಾರಣದಿಂದಲೇ ಶೇಕಡ 70ರಷ್ಟು ಹೆಚ್ಚಿದ್ದು, ಈ ಹೆಚ್ಚಳ ಏರುತ್ತಲೇ ಇದೆ. ಮುಖ್ಯ ಕಚ್ಚಾವಸ್ತು ಎನಿಸಿದ ಕ್ರಾಫ್ಟ್ ಪೇಪರ್‌ನ ವೆಚ್ಚ ಹೆಚ್ಚಳದಿಂಧಾಗಿ ಇಡೀ ಉದ್ಯಮ ಇಂದು ತೀವ್ರ ಸಂಕಷ್ಟದಲ್ಲಿ ಸಿಲುಕಿದೆ. ಬೇಡಿಕೆಯ ಅಂತರ ಹಾಗೂ ಚೀನಾದಲ್ಲಿರುವ ಆಕರ್ಷಕ ಬೆಲೆ ಕಾರಣದಿಂದ ಭಾರತೀಯ ಕ್ರಾಫ್ಟ್ ಪೇಪರ್ ಕಂಪನಿಗಳ ಉತ್ಪನ್ನಗಳು ದೇಶೀಯ ಮಾರುಕಟ್ಟೆಯಿಂದ ವಿಮುಖವಾಗುತ್ತಿವೆ. ಇಂತಹ ಉತ್ಪಾದನಾ ಘಟಕಗಳ ಒಟ್ಟು ಉತ್ಪಾದನೆಯ ಶೇ. 20ರಷ್ಟಾಗಿದೆ. 2018ಕ್ಕೆ ಪೂರ್ವದಲ್ಲಿ ರಫ್ತಾಗುತ್ತಿದ್ದ ಪ್ರಮಾಣ ಶೂನ್ಯವಾಗಿದ್ದು, ಭವಿಷ್ಯದಲ್ಲಿ ಸಕ್ರಿಯ ಪೂರೈಕೆಯ ಮೇಲೆ ಪರಿಣಾಮ ಉಂಟಾಗಲಿದೆ. ಹೀಗಾಗಿ ಉದ್ಯಮ ಮುಚ್ಚುವ ಭೀತಿಯಲ್ಲಿದ್ದು ಸರಕಾರ ನಮ್ಮ ರಕ್ಷಣೆಗೆ ಕ್ರಮವಹಿಸಿಬೇಕು ಎಂದು ಭಾರತೀಯ ರಟ್ಟಿನ ಪೆಟ್ಟಿಗೆಗಳ ಉತ್ಪಾದಕರ ಸಂಘ (ಐಸಿಸಿಎಂಎ) ಅಧ್ಯಕ್ಷ ಸಂದೀಪ್ ವಾಧ್ವಾ ತಿಳಿಸಿದ್ದಾರೆ.